# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ : ಸ.ಅ/ವಾರ್ಡ್ ಸಮಿತಿ/2020-21 ದಿನಾಂಕ : 04-03-2021

## -: ಸಭಾ ಸೂಚನಾ ಪತ್ರ :-

ಉಲ್ಲೇಖ : 1) ಮಾನ್ಯ ಆಯುಕ್ತರ ಕಛೇರಿಯ ಆದೇಶ ಸಂಖ್ಯೆ : ಬಿ12(5)ಪಿಆರ್/35/ 2020-21 ದಿನಾಂಕ : 21-09-2020.

-****-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಸರ್ವಜ್ಞನಗರ ವಿಭಾಗ, ಮಾರುತಿಸೇವಾನಗರ ಉಪ ವಿಭಾಗ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ-59 ಮಾರುತಿ ಸೇವಾನಗರ ವ್ಯಾಪ್ತಿಯ ವಾರ್ಡ್ ಕಛೇರಿ ಸಭಾಂಗಣದಲ್ಲಿ ದಿನಾಂಕ: 06-03-2021 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಗೆ ಎಲ್ಲಾ ಸದಸ್ಯರು ಸಕಾಲದಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಿದೆ.

## -: ಸಭಾ ಅಜೆಂಡಾ :-

| | |
|---|---|
| 1 | ಹಿಂದಿನ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡುವುದು |
| 2 | ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ. |
| 3 | ವಾರ್ಡ್ ವ್ಯಾಪ್ತಿಯ ಕಾಮಗಾರಿಗಳು, ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ. |
| 4 | ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಮತ್ತು ಮಳೆ ನೀರಿನ ಸಮಸ್ಯೆಯ ಬಗ್ಗೆ ಚರ್ಚಿಸುವ ವಿಚಾರ. |
| 5 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಬಗ್ಗೆ ಚರ್ಚಿಸುವ ಬಗ್ಗೆ. |
| 6 | ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಚಾರಗಳು |

(ನೋಡಲ್ ಅಧಿಕಾರಿ ರವರ ಆದೇಶದ ಮೇರೆಗೆ)

ಸಹಿ/-

ಕಾರ್ಯದರ್ಶಿ ವಾರ್ಡ್ ಸಮಿತಿ-59

ಹಾಗೂ ಸಹಾಯಕ ಅಭಿಯಂತರರು,

ವಾರ್ಡ್-59

**ಪ್ರತಿಯನ್ನು**

1. ವಾರ್ಡ್ ಸಮಿತಿಯ ಎಲ್ಲಾ ಸದಸ್ಯರುಗಳ ಮಾಹಿತಿಗಾಗಿ ಹಾಗೂ ಸಭೆಯಲ್ಲಿ ಭಾಗವಹಿಸಲು ಕೋರಿದೆ.

ಪು.ತಿ.ನೋ

2. ತೋಟಗಾರಿಕಾ ಅಧೀಕ್ಷಕರು, ಪೂರ್ವ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ
3. ಅರಣ್ಯ ಸಂರಕ್ಷಣಾಧಿಕಾರಿಗಳು, ಪೂರ್ವ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುತಿಸೇವಾನಗರ ಉಪವಿಭಾಗ, ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ(ಸರ್ವಜ್ಞನಗರ), ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
8. ಸಹಾಯಕ ಕಂದಾಯ ಅಧಿಕಾರಿಗಳು, ಮಾರುತಿಸೇವಾನಗರ ಉಪವಿಭಾಗ, ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂದಿಯನ್ನು ನಿಯೋಜಿಸಲು ಕೋರಿದೆ.
9. ಪೊಲೀಸ್ ಇನ್ಸ್‌ಪೆಕ್ಟರ್, ಬಾಣಸವಾಡಿ / ರಾಮಮೂರ್ತಿನಗರ ಪೊಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ರಸ್ತೆಗಳು ಮತ್ತು ಮೂಲಭೂತ ಸೌಕರ್ಯಗಳು ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ಬೃಹತ್ ನೀರುಗಾಲುವೆ(ಎಸ್‌ಡಬ್ಲ್ಯೂಡಿ)ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಪೂರ್ವ), ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.

04/3/2021

**ಕಾರ್ಯದರ್ಶಿ ವಾರ್ಡ್ ಸಮಿತಿ-59**

**ಹಾಗೂ ಸಹಾಯಕ ಅಭಿಯಂತರರು,**

**ವಾರ್ಡ್-59**

08-03-2021 ರಂದು ಹಾಜರಾದ ಸದಸ್ಯರು

ಪುಟ 3

1) A. R. Suresh 9980008943 [signature]
REWABE

2) A. MANI SHANKAR. SrHI W. 59. [signature] 8/3/21

3) C. M. Venkatesh Health Inspector [signature] 8/3/21

4) G. U. Nagaraja ~~W.S.~~ 53 [signature] [illegible]

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.59, ಮಾರುತಿಸೇವಾನಗರ ವಾರ್ಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿ ಸಭಾಂಗಣದಲ್ಲಿ ದಿನಾಂಕ: 08-03-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರು,**

1. ಶ್ರೀ ನಾರಾಯಣಸ್ವಾಮಿ, ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಕೆ.ಶ್ರೀಕಾಂತ್, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ ಎ.ಮಣಿಶಂಕರ್, ಹಿರಿಯ ಆರೋಗ್ಯ ನಿರೀಕ್ಷಕರು,
4. ಎ.ಆರ್.ಸುರೇಶ್, ರಿವ್ರೋಬ್ ಅಸೋಸಿಯೇಷನ್

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ಸಿ.ಎಂ ವೆಂಕಟೇಶ್ ತೋಟಗಾರಿಕಾ ಇಲಾಖೆ,
2. ಶ್ರೀ ನಾಗರಾಜ್ ಜಿ.ವಿ ಅಸೆಸ್ಸರ್,

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಮಾಹಿತಿ | ಕ್ರಮ |
|---|---|---|
| i | **ತೋಟಗಾರಿಕಾ ಇಲಾಖೆ (Horticulture Dept)** | |
| | ವಾರ್ಡ್ ವ್ಯಾಪ್ತಿಯ ಮಿಲ್ಲರ್ಸ್ ಸ್ಟ್ರೀಟ್ ಹಾಗೂ ಹೈ ಸ್ಟ್ರೀಟ್ ನಲ್ಲಿರುವ ಉದ್ಯಾನವನಗಳ ನಿರ್ವಹಣೆಗೆ ಮಾಡಲು ಸ್ಥಳೀಯರು ಸಭೆಯಲ್ಲಿ ಪ್ರಸ್ತಾಪಿಸಿದರು. | ತೋಟಗಾರಿಕಾ ಇಲಾಖೆ **(Horticulture Dept)** ರವರು ರವರು ಮಾತನಾಡಿ ಸದರಿ ಕಾಮಗಾರಿಯು ಈಗಾಗಲೇ ಪಿ.ಓ.ಡಬ್ಲ್ಯೂ ಅಡಿಯಲ್ಲಿ ಅನುಮೋದನೆಗೊಂಡಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿಯನ್ನು ನಿರ್ವಹಿಸಲಾಗುವುದೆಂದು ಸಭೆಗೆ ತಿಳಿಸಿದರು. |
| ii | **Traffic Engneering Cell** | |
| | ವಾರ್ಡ್ ವ್ಯಾಪ್ತಿಯ ಹಚ್ಚಿನ್ಸ್ ರಸ್ತೆ, ನಾರ್ಥ್ ರಸ್ತೆ ಕಾರ್ನರ್‌ನಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾಗುತ್ತಿದ್ದು, ಸದರಿ ರಸ್ತೆಗಳಲ್ಲಿ ಸಂಚರಿಸುವ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಕೂಡಲೇ ಸದರಿ ಪ್ರದೇಶದ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ಕ್ರಮ ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಸಭೆಯಲ್ಲಿ ಪ್ರಸ್ತಾಪಿಸಿದರು.<br>ಹಾಗೂ ಈ ಪ್ರದೇಶದಲ್ಲಿ ರಾತ್ರಿ ಸಮಯದಲ್ಲಿ ಕೆಲವು ಪುಂಡ ಪೋಕಿರಿಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ಪ್ರದೇಶದಲ್ಲಿ ಪೊಲೀಸ್ ಗಸ್ತನ್ನು ಹೆಚ್ಚಿಸಿ, ಅಂತಹ ವ್ಯಕ್ತಿಗಳ ವಿರುದ್ಧ ಸೂಕ್ತ ಕ್ರಮ ವಹಿಸಲು ಸಭೆಗೆ ತಿಳಿಸಿದರು. | **Traffic Engneering Cell** ರವರು ಕೂಡಲೇ ಈ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು. |

| | | |
|---|---|---|
| iii | ಘನತ್ಯಾಜ್ಯ ನಿರ್ವಹಣೆ (**SWM Dept**) | |
| | ವಾರ್ಡ್ ವ್ಯಾಪ್ತಿಯ ನಾಗಯ್ಯನಪಾಳ್ಯ ಪ್ರದೇಶದಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಮನೆ ಮನೆಗಳಿಂದ ಸಮರ್ಪಕವಾಗಿ ಸಂಗ್ರಹಣೆ ಮಾಡದೇ ಇರುವುದರಿಂದ ಸಾರ್ವಜನಿಕರು ಎಲ್ಲಂದರಲ್ಲಿ ಖಾಲಿ ನಿವೇಶನಗಳಲ್ಲಿ ಕಸವನ್ನು ಸುರಿಯುತ್ತಿದ್ದು, ಈ ಬಗ್ಗೆ ಕೂಡಲೇ ಕ್ರಮ ವಹಿಸಲು ಹಾಗೂ ಒಣಕಸವನ್ನು ವಾರದಲ್ಲಿ ಎರಡು ಬಾರಿ ಸಂಗ್ರಹಣೆ ಮಾಡುತ್ತಿದ್ದು, ಈ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಸಭೆಗೆ ತಿಳಿಸಿದರು ಹಾಗೂ ವಾರ್ಡ್ ವ್ಯಾಪ್ತಿಯ ಖಾಲಿ ನಿವೇಶನಗಳಲ್ಲಿ ಕಸವನ್ನು ಸುರಿಯುತ್ತಿರುವವರಿಗೆ ಸೂಕ್ತ ದಂಡ ವಿಧಿಸಲು ಸಭೆಗೆ ತಿಳಿಸಿದರು. | **ಘನತ್ಯಾಜ್ಯ ನಿರ್ವಹಣೆ (SWM Dept) ರವರು ಈ ಬಗ್ಗೆ ಕ್ರಮ ವಹಿಸಿ, ಮುಂದಿನ ಸಭೆಗೆ ಮಾಹಿತಿ ನೀಡುವುದು.** |

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

8/03/2021

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.59, ಮಾರುತಿಸೇವಾನಗರ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.59, ಮಾರುತಿಸೇವಾನಗರ

**ಪ್ರತಿಯನ್ನು**

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ / ಕಛೇರಿ ಕಡತಕ್ಕೆ.